ದಿ.06-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು ಶ್ರೀ ಹೆಚ್.ಬಿ ವಕೀಲರಿಂದ :-</u>**

ನಾನು ಮೂಲತ: ಕಸಬಾಲಿಂಗಸುಗೂರಿನವನು. ನಾನು ಒಕ್ಕಲುತನ ಮಾಡುತ್ತೇನೆ. ಕಬಸಲಿಂಗಸುಗೂರಿನಲ್ಲಿ ನಮ್ಮ ಮನೆ 20ನೇ ವಾರ್ಡಿನಲ್ಲಿ ಬರುತ್ತದೆ. ಈ ದಾವಾ ಆಸ್ತಿಯೂ ಸಹ 20ನೇ ವಾರ್ಡಿನಲ್ಲಿ ಬರುತ್ತದೆ. ದಾವಾ ಆಸ್ತಿ ನಂ.3-2-140/1 ಇರುತ್ತದೆ. ನಮ್ಮ ಮನೆಗೂ ಮತ್ತು ದಾವಾ ಆಸ್ತಿಗೂ 100 ಮೀಟರ್ ಅಂತರವಿರುತ್ತದೆ. ದಾವಾ ಆಸ್ತಿ ಸಿದ್ದಲಿಂಗೇಶ್ವರಗೌಡ ರವರದ್ದಾಗಿರುತ್ತದೆ. ಸಿದ್ದಲಿಂಗೇಶ್ವರಗೌಡರವರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಅದು ಅವರ ಹಿರಿಯರ ಆಸ್ತಿ ಆಗಿದಿಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು ವಾದಿ ದೊಡ್ಡಬಸಪ್ಪ ಖರೀದಿ ಮಾಡಿರುತ್ತಾರೆ. ಅಮರೇಶ ಎನ್ನುವವರಿಗೆ ಅವರ ತಂದೆಯ ಕಡೆಯಿಂದ ದಾವಾ ಆಸ್ತಿ ಬಂದಿರುತ್ತದೆ. ಅಮರೇಶ ಕಡೆಯಿಂದ ದಾವಾ ಆಸ್ತಿಯನ್ನು ವಾದಿ ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿ ಪೂರ್ವ-ಪಶ್ಚಿಮ 60 ಮತ್ತು ಉತ್ತರ-ದಕ್ಷಿಣ 20 ಮೀಟರ್ ಇರುತ್ತದೆ. ಪೂರ್ವಕ್ಕೆ ರಸ್ತೆ ಮತ್ತು ಅಮರಪ್ಪ ತಂದೆ ದೊಡ್ಡಬಸಪ್ಪ ರವರ ಜಾಗ, ಪಶ್ಚಿಮಕ್ಕೆ ಕುಪ್ಪಣ್ಣ ತಲೆವಡಕರ ರವರ ಖಾಲಿ ಜಾಗ, ಉತ್ತರಕ್ಕೆ ಕುಪ್ಪಣ್ಣ ತಂದೆ ಅಮರಪ್ಪ ರವರ ಖಾಲಿ ಜಾಗ ಹಾಗೂ ದಕ್ಷಿಣಕ್ಕೆ ರಸ್ತೆ ಇರುತ್ತದೆ. ಈ ಮೇಲೆ 60 * 20 ಮೀಟರ್ ಆಸ್ತಿಯು ಅಮರೇಶಪ್ಪರವರ ಹೆಸರಿನಲ್ಲಿದ್ದ ದಾಖಲೆ ನೋಡಿರುತ್ತೇನೆ.

2. ಇದೇ ಆಸ್ತಿಯಲ್ಲಿ ನಾನು ವಾದಯ ಜೊತೆ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಮೊದಲು ನಾನು ಜಾಗವನ್ನು ಖರೀದಿ ಮಾಡಿದ್ದೆ ನಂತರ 2-3 ದಿನ ಬಿಟ್ಟು ವಾದಿ ಖರೀದಿ ಮಾಡಿರುತ್ತಾನೆ. ನಾನು ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 60 ಪೀಟ್ ಉತ್ತರ-ದಕ್ಷಿಣ 50 ಪೀಟ್ ಇರುತ್ತದೆ. ನಾನು ಖರೀದಿ ಮಾಡಿದ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ ಇದೆ, ಪಶ್ಚಿಮಕ್ಕೆ ಕುಪ್ಪಣ್ಣ ತಲೆವಡಕರ ರವರ ಖಾಲಿ ಜಾಗ, ಉತ್ತರಕ್ಕೆ ಶರಣಪ್ಪ ತಂದೆ ಬಸಲಿಂಗಪ್ಪರವರ ಖಾಲಿ ಜಾಗ ಹಾಗೂ ದಕ್ಷಿಣಕ್ಕೆ ದೊಡ್ಡಬಸಪ್ಪ ಖರೀದಿ ಮಾಡಿದ ಜಾಗ ಇರುತ್ತದೆ. ಎರಡೂ ಪ್ಲಾಟಗಳಿಗೆ ಕಲ್ಲು ಒಡ್ಡುಗಳಿವೆ. ನಾನು ಖರಿದಿ ಮಾಡುವಾಗ ಜಾಗ ನೋಡಿ ಖರೀದಿಸಿರುತ್ತೇನೆ. ನಾವು ಖರೀದಿ ಮಾಡುವ ಪೂರ್ವದಲ್ಲಿ ಸದರಿ ಜಾಗದಲ್ಲಿ ಬಣವಿ ಇದ್ದಿರಲಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಯ ಖುಲ್ಲಾ ಜಾಗ ಇದೆ ಎಂದರೆ ಸರಿಯಲ್ಲ. ಆ ಜಾಗದಲ್ಲಿ ಪ್ರತಿವಾದಿಯರು ಬಣೆವೆ ಹಾಕಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಯು ಬೆಂಗಳೂರಿಗೆ ಹೋದಾಗ ಅವರು ಬಣೆವೆ ಹಾಕಿರುತ್ತಾರೆ

ಎನ್ನುತ್ತಾರೆ. ಅಮರೇಶಪ್ಪರವರಿಗೆ ಇದ್ದಿದ್ದು ಕೇವಲ ಒಂದೆ ಜಾಗ ಅದೇ ಜಾಗವನ್ನು ನನಗೂ ಮತ್ತು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯು ಖರೀದಿ ಮಾಡಿದ ಜಾಗ ಮೊದಲು ಸರ್ಕಾರಿ ಜಾಗ ಎಂದರೆ ಸರಿಯಲ್ಲ. ಅಮರೇಶಪ್ಪರವರ ತಂದೆ ರಾಜಕೀಯ ವ್ಯಕ್ತಿ ಇದ್ದ ಎಂದರೆ ಸರಿಯಲ್ಲ. ಆತ ರಾಜಕೀಯ ವ್ಯಕ್ತಿಯಾಗಿದ್ದರಿಂದ ಪುರಸಭೆಯಲ್ಲಿ ಸರ್ಕಾರಿ ಜಾಗವನ್ನು ಕಾನೂನು ಬಾಹಿರವಾಗಿ ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. ದಾವಾ ಜಾಗ ಮತ್ತು ಪ್ರತಿವಾದಿಗೆ ಸಂಬಂಧಿಸಿದ ಜಾಗ ತನಗೆ ಸಂಬಂದಿಸಿದ್ದು ಎಂದು ಅಮರೇಶಪ್ಪ ನನಗೆ ಮತ್ತು ವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಮೇಪಿನ ಬಣಿವೆ ಇರುವ ಜಾಗ ಪ್ರತಿವಾದಿಯರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಪ್ರತಿವಾದಿಯರು ವಾದಿಯ ಜಾಗವನ್ನು ಒತ್ತುವರಿ ಮಾಡಿ ಬಣಿವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಯಾವುದೇ ಕಾಲಕ್ಕೂ ಬೆಂಗಳೂರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಜಾಗ ಒಂದೇ ಇದ್ದು ಪಕ್ಕದಲ್ಲಿರುವ ಖಾಲಿ ಜಾಗವನ್ನು ಹೊಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಯ ಜಾಗಕ್ಕಾಗಲಿ ಅಥವಾ ನನ್ನ ಜಾಗಕ್ಕಾಗಲೀ ಯಾವುದೇ ಅತಿಕ್ರಮ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಒಂದೆ ಕುಲದವರಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.